## ಕವಿತೆ



**ನಾಗರೇಖಾ ಗಾಂವಕರ**

ಕಲೆ: ಸೌಮ್ಯ ಪ್ರಭು ಕಲ್ಯಾಣಕರ್

# ಹೆಸರಿಲ್ಲದ ಹಾಳೆ

ಇರಲಿ ಬಿಡಿ ಒಂದು ಗುಪ್ತ
ಕನಸಿನ ಚಿತ್ತಾರ ಬಿಡಿಸಿದ ಹಾಳೆ
ಎದೆಗೂಡ ಕಪಾಟಿನಲ್ಲಿ ಭದ್ರ
ನಾವೇ ಬಿಡಿಸಿದ ಚಿತ್ರ ಅಥವಾ
ಬಿಡಿಸಲಾಗದೇ ಅರ್ಧಮರ್ಧ
ಹಾಗೇ ಇಟ್ಟು ಕಾಯುತ್ತಿರುವಾಗ
ಬಣ್ಣಗಳ ಆಯ್ಕೆಯಲ್ಲಿ ಗೊಂದಲ
ಮೂಡಿ ಇರಲೆಂದು ಮತ್ತೆ ಬಿಡಿಸಿದರಾಯ್ತೆಂದು
ಮಡಚಿಟ್ಟ ಪುಟ.
ಇರಲಿ ಬಿಡಿ ಹಾಗೇ!

ಕಾಲಕ್ರಮೇಣ ನೆನಪುಗಳ ತೆಗೆದು
ಉಸಿರು ಕಸಿಯುವಾಗ ಕಾಲ
ಎದೆಯೊಳಗೆ ನವಿಲಾಡಿಸಿಕೊಳ್ಳಲಾದರೂ
ಇರಲಿ ಬಿಡಿ ಕನಸಿದಂತಹ ಹಾಳೆ.
ದಿಕ್ಕು ತಪ್ಪಿ ಗಾಳಿಗೆ ಅಡ್ಡಾದಿಡ್ಡಿ
ತೇಲಿ ಮತ್ತೆ ಗೂಡಿಗೆ ಬರಲಾಗದ
ಹಾಳೆ ಕೈಸೇರಿದವರ ಕೈಯಲ್ಲಿ ನುಜ್ಜುಗುಜ್ಜಾಗಿ
ಆಡಿಕೊಳ್ಳುವವರ ಬಾಯೆಂಜಲವಾಗಿ
ಬೆವರಿಗೆ ತೊಪ್ಪೆಯಾಗಿ
ಸವೆದರೂ, ನಮೆದರೂ
ಹಾಳೇ ಆದರೂ
ಇರಲಿ ಬಿಡಿ...

ಇರಬಹುದು ಇಲ್ಲವೆನ್ನುವವರ
ಎದೆಯೊಳಗೆ, ನೆನಪಿನ ಬಲೆಯೊಳಗೆ
ಮುಸುಕು ಮಬ್ಬಿನ ಹಾಗೆ
ಅಸ್ಪಷ್ಟ ರೇಖೆಗಳನ್ನು ಮೂಡಿಸಿದ ಹಾಳೆ
ನಿಷ್ಕರ್ಷಕ್ಕೆ ಸಿಗದ ನಿಲುವುಗನ್ನಡಿಯೊಳಗೆ
ಅಲ್ಲಿ ಇಲ್ಲಿ ಅವನಲ್ಲಿ ಇವಳಲ್ಲಿ
ಮತ್ತವಳ ತುರಬಿನ ಗಂಟಲ್ಲಿ
ಇವನ ಒಳ ಕಿಸೆಯ ಕಗ್ಗಂಟಲ್ಲಿ

ಹೆಸರಿಲ್ಲದೇ ಬರೆದ ಹಾಳೆ.

